# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-632/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 11/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಅಬ್ದುಲ್ ರೆಹಮಾನ್ ಅಬುಬಕರ ಮಳಗಲಿ, ರಾಮದುರ್ಗ, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಅಬ್ದುಲ್ ರೆಹಮಾನ್ ಅಬುಬಕರ ಮಳಗಲಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣ ಪುರಸಭೆಯ ವ್ಯಾಪ್ತಿಯಲ್ಲಿ ಸಿಟಿಎಸ್ ನಂ:3234/2ರ ಆಸ್ತಿ ತನ್ನ ಸ್ವಂತ ಆಸ್ತಿಯಾಗಿದ್ದು, ಇದರ ಮಾಲ್ಕಿ ಹಾಗೂ ಕಬ್ಜ ತನ್ನ ವಹಿವಾಟಿನಲ್ಲಿ ಇರುತ್ತದೆ ಎಂದು ದಿ:01/10/2013 ರಂದು ಮುಖ್ಯಾಧಿಕಾರಿಗಳು, ಪುರಸಭೆ, ರಾಮದುರ್ಗ ಇವರಿಂದ ಕಟ್ಟಡ ರಚನೆಗೆ ಪರವಾನಗೆಯನ್ನು ಪಡೆದುಕೊಂಡು ಮನೆ ಕಟ್ಟಿಕೊಂಡಿರುತ್ತೇನೆಂದು, ಸದರಿ ತನ್ನ ಮನೆಗೆ ಓಡಾಡಲು ರಾಮದುರ್ಗ-ಬೆಳಗಾವಿ ರಸ್ತೆಯಿಂದ ಒಂದು ಸಂದಿ (ಸಣ್ಣ ಸಾರ್ವಜನಿಕ ರಸ್ತೆ) ಇರುತ್ತದೆ. ಸದರಿ ರಸ್ತೆ ಹೊರತುಪಡಿಸಿ ತಮಗೆ ಬೇರಾವುದೇ ರಸ್ತೆ ಇರುವುದಿಲ್ಲ. ಈ ರಸ್ತೆಯ ಅಕ್ಕಪಕ್ಕದಲ್ಲಿ ಶ್ರೀ ಎ.ಬಿ. ಬೆಣ್ಣಿ ಮತ್ತು ಶ್ರೀ ಆರ್.ಹೆಚ್.ಮನಿಯಾರ ಇವರು ಯಾವುದೇ ಪರವಾನಗೆ ಇಲ್ಲದೇ ಅತಿಕ್ರಮಣ ಮಾಡಿ ಅಂಗಡಿಗಳನ್ನು ನಿರ್ಮಿಸಿದ್ದಾರೆ ಮತ್ತು ಅವುಗಳನ್ನು ಶಾಶ್ವತ ಕಟ್ಟಡಗಳನ್ನಾಗಿ ಪರಿವರ್ತಿಸುವ ಹುನ್ನಾರದಲ್ಲಿರುತ್ತಾರೆ. ಸದರಿ ಶೆಡ್ಡುಗಳನ್ನು ತೆರವುಗೊಳಿಸಲು ಕೋರಿ ಮುಖ್ಯಾಧಿಕಾರಿಗಳು, ಪುರಸಭೆ, ರಾಮದುರ್ಗ ಇವರಿಗೆ ಅರ್ಜಿಗಳನ್ನು ನೀಡಿದ್ದು, ಮೌಖಿಕವಾಗಿ ವಿನಂತಿಸಿದ್ದರು, ಪುರಸಭೆಯ ಮುಖ್ಯಾಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ರಾಮದುರ್ಗ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ: 51/1973 ರಲ್ಲಿ ಹಾಗೂ ಅಸಲು ದಾವೆ ಸಂ:46/1978 ರಲ್ಲಿ ಸದರಿ ಅತಿಕ್ರಮಣ ತೆರವುಗೊಳಿಸಲು ಆದೇಶವಾಗಿರುತ್ತದೆ. ಆದ್ದರಿಂದ, ಸದರಿ ಶೆಡ್ಡುಗಳನ್ನು ತೆರವುಗೊಳಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರಿಗೆ ನೋಟೀಸ್ ಜಾರಿಯಾಗಿದ್ದರೂ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. ದೂರಿನಂಶಗಳನ್ನು, ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಅಸಲು ದಾವೆ ಸಂ:51/1973ರ ತೀರ್ಪಿನ ಪ್ರತಿಯನ್ನು ದೂರುದಾರರು ಹಾಜರುಪಡಿಸಿದ್ದು, ಸದರಿ ದಾವೆಯಲ್ಲಿ ದಾವಾ ಸ್ವತ್ತು ಸಿಟಿಎಸ್ ನಂಬರ್ 3234/2 ರ ಮನೆ ಮತ್ತು ಖಾಲಿ ನಿವೇಶನ ದಾವಾ ಸ್ವತ್ತಾಗಿರುವುದು ಕಂಡು ಬರುತ್ತದೆ. ಸದರಿ ದಾವಾಸ್ವತ್ತಿಗೆ ವಾದಿ ಶ್ರೀ ಮೊಹಮ್ಮದ್ ಹನಿಫ್ ರಸೂಲ್‌ಸಾಬ್ ತಾಸಗಾಂವ್ ಇವರು ಮಾಲೀಕರಾಗಿರುವುದಾಗಿ ಕಂಡು ಬರುತ್ತದೆ. ಸದರಿ ದಾವಾದಲ್ಲಿ 1 ಮತ್ತು 2ನೇ ಪ್ರತಿವಾದಿಗಳಾದ ಶ್ರೀ ಗೂಡುಸಾಬ್ ಹುಸೇನ್‌ಸಾಬ್ ಮನಿಯಾರ್ ಹಾಗೂ ಶ್ರೀ ಹಸನ್ ಸಾಬ್ ಗೂಡುಸಾಬ್ ಮನಿಯಾರ್ ಇವರುಗಳು ದೂರುದಾರರ ಮನೆ ಬಳಿ ಇರುವ ಘಟಾರದ ಮೇಲೆ 1 ಮತ್ತು 2ನೇ ಪ್ರತಿವಾದಿಗಳು ಶೀಟಿನ ಶೆಡ್‌ಅನ್ನು ಹಾಕಿದ್ದು, ಇದರಿಂದ ವಾದಿಯ ಮನೆಯ ಬಳಿ ಇರುವ ಪುರಸಭೆಯ ಘಟಾರವನ್ನು ಸ್ವಚ್ಛಗೊಳಿಸಲು ಸಾಧ್ಯವಿರುವುದಿಲ್ಲ ಹಾಗೂ ಮಳೆ ನೀರನ್ನಾಗಲೀ ಅಥವಾ ಸ್ನಾನಗೃಹದ ನೀರು ಸರಾಗವಾಗಿ ಹೋಗಲು ತಡೆ ಉಂಟಾಗುತ್ತಿದ್ದು, ಇದರಿಂದ ಸದರಿ ಸ್ಥಳದಲ್ಲಿ ನೀರು ನಿಂತು ಪರಿಸರ ಮಾಲಿನ್ಯವಾಗುತ್ತಿರುತ್ತದೆ ಎಂದು ಆದ್ದರಿಂದ, ಸದರಿ ಶೆಡ್‌ಅನ್ನು ತೆಗೆಸಲು ಕೋರಿ ನಿರಂತರ ತಡೆಯಾಜ್ಞೆಯನ್ನು ನೀಡುವಂತೆ ಸದರಿ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ನಿರಂತರ ಪ್ರತಿಬಂಧಕ ಆಜ್ಞೆಯನ್ನು ಮತ್ತು ಸದರಿ ಶೆಡ್ ಅನ್ನು ತೆಗೆಯಲು ಆದೇಶಿಸಿರುವುದು ಕಂಡು ಬರುತ್ತದೆ. ಹಾಗೆಯೇ ಅಸಲು ದಾವೆ ಸಂಖ್ಯೆ: 46/1978 ಅನ್ನು ಮೇಲೆ ಹೇಳಿದ ಶ್ರೀ ಗೂಡುಸಾಬ್ ಹಸನ್‌ಸಾಬ್ ಮನಿಯಾರ್ ಹಾಗೂ ಶ್ರೀ ಹಸನ್‌ಸಾಬ್ ಗೂಡುಸಾಬ್ ಮನಿಯಾರ್ ಇವರುಗಳು ಸದರಿ ದಾವೆಯನ್ನು ಹೂಡಿದ್ದು, ಅದರಲ್ಲಿ ಶ್ರೀ ಮೊಹಮ್ಮದ್ ಹನೀಫ್ ರಸೂಲ್‌ಸಾಬ್ ತಾಸಗಾಂವ್ ಇವರು 1ನೇ ಪ್ರತಿವಾದಿಯಾಗಿದ್ದು, ರಾಮದುರ್ಗದ ಪುರಸಭೆಯ ಮುಖ್ಯಾಧಿಕಾರಿಯನ್ನು 2ನೇ ಪ್ರತಿವಾದಿಯನ್ನಾಗಿ ಮಾಡಲಾಗಿರುತ್ತದೆ. ಸದರಿ ದಾವೆಯಲ್ಲಿ ಮೇಲೆ ಹೇಳಿದ ಶೆಡ್ ಅನ್ನು ಕಟ್ಟಿದ್ದು, ಸದರಿ ದಾವಾ ಸ್ವತ್ತನ್ನು ತೆರವುಗೊಳಿಸದಂತೆ ನಿರಂತರ ತಡೆಯಾಜ್ಞೆಯನ್ನು ನೀಡಲು ಕೋರಿದ್ದು, ಮಾನ್ಯ ನ್ಯಾಯಾಲಯವು ಸದರಿ ದಾವೆಯನ್ನು ವಜಾಗೊಳಿಸಿ ಆದೇಶಿಸಿರುತ್ತದೆ. ದೂರುದಾರರು ಹಾಲಿ ಸದರಿ ಆಸ್ತಿ ಸಂಖ್ಯೆ: ಸಿಟಿಎಸ್ 3234/2 ರಲ್ಲಿ ವಾಸವಿದ್ದು, ವಾಸದ ಮನೆಗೆ

ಹೋಗಿ ಬರಲು ಇರುವ ರಸ್ತೆಯಲ್ಲಿ ಶ್ರೀ ಎ.ಬಿ. ಬೆಣ್ಣೆ ಮತ್ತು ಆರ್.ಹೆಚ್. ಮನಿಯಾರ್ ಇವರುಗಳು ಅತಿಕ್ರಮಿಸಿ ಅಂಗಡಿ ಶೆಡ್‌ಗಳನ್ನು ನಿರ್ಮಿಸಿರುತ್ತಾರೆಂದು, ಅದರಿಂದ, ತಮಗೆ ಓಡಾಡಲು ತೊಂದರೆ ಉಂಟಾಗಿರುತ್ತದೆ ಎಂದು, ಆ ತೊಂದರೆ ನಿವಾರಿಸಿಕೊಡಲು ಪುರಸಭೆಯವರಿಗೆ ಹಲವಾರು ಮನವಿಗಳನ್ನು ನೀಡಿದ್ದರೂ, ಎದುರುದಾರರು ಯಾವುದೇ ಕ್ರಮ ಜರುಗಿಸಿಲ್ಲವೆಂದು, ಆದ್ದರಿಂದ, ಸದರಿ ರಸ್ತೆಗೆ ಅಡ್ಡಲಾಗಿ ಕಟ್ಟಿರುವ ಶೆಡ್ ಅನ್ನು ತೆರವುಗೊಳಿಸಿ ತಮ್ಮ ತೊಂದರೆ ನಿವಾರಿಸಿಕೊಡಬೇಕೆಂದು ಕೋರಿರುತ್ತಾರೆ.

4. ಈ ಸಂಬಂಧ ದೂರುದಾರರು ಸಿಟಿ ಸರ್ವೆ ಆಫೀಸ್ ರಾಮದುರ್ಗ ಇಲ್ಲಿಂದ ಪಡೆದಿರುವ ನಕಾಶೆಯನ್ನು ಹಾಜರುಪಡಿಸಿದ್ದು, ಸದರಿ ನಕಾಶೆಯಲ್ಲಿ ದೂರುದಾರರ ಮನೆ ಇರುವ ನಿವೇಶನದ ಪಶ್ಚಿಮೋತ್ತರ ಅಂಚಿನಲ್ಲಿ ಸಂದಿ ರಸ್ತೆ ಇರುವುದು ತೋರಿಸಲಾಗಿದೆ. ಇದರಿಂದ ದೂರುದಾರರ ಮನೆಯ ಬಳಿ ರಸ್ತೆ ಇರುವುದು ಸ್ಪಷ್ಟಪಡುತ್ತದೆ. ದೂರುದಾರರು ತಮ್ಮ ಮನೆಯ ಬಳಿಯ ಪೋಟೋಗಳನ್ನು ಹಾಜರುಪಡಿಸಿದ್ದು, ಈ ಪೋಟೋಗಳನ್ನು ಪರಿಶೀಲಿಸಿದಲ್ಲಿ ರಸ್ತೆಯ ಬಳಿಯಲ್ಲಿ ಶೀಟಿನ ಶೆಡ್ ಅನ್ನು ಕಟ್ಟಿರುವುದು ಕಂಡು ಬರುತ್ತದೆ. ಹಾಗೂ ಸದರಿ ಶೆಡ್‌ಗಳನ್ನು ಕಟ್ಟಿರುವುದರಿಂದ ರಸ್ತೆ ಕಿರಿದಾಗಿರುವುದು ಸಹ ಕಂಡು ಬರುತ್ತದೆ. ಇದರಿಂದ ದೂರುದಾರರಿಗೆ ತೊಂದರೆ ಉಂಟಾಗಿರುವುದು ಸಹ ಕಂಡು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ದೂರುದಾರರ ತೊಂದರೆ ನಿವಾರಣೆಗೆ ಅಕ್ರಮವಾಗಿ ನಿರ್ಮಿತವಾಗಿರುವ ಶೆಡ್‌ಗಳನ್ನು ರಾಮದುರ್ಗ ಪುರಸಭೆ ವತಿಯಿಂದ ತೆರವುಗೊಳಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 11/4

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 11/4/14